ಲಕ್ಕೋ ಪ್ರಮಾಣ ಪತ್ರ ರದ್ದಾಗಿರುವುದರಿಂದ ಸದರಿ ಸಂಘವು ಖಾದಿ ಆಯೋಗದ ಮಾನ್ಯತೆಯನ್ನು ಕಳೆದುಕೊಂಡಿದ್ದು ಭೂ ಕಂದಾಯ ವಸೂಲಾತಿ ನಿಯಮಾವಳಿ ಅನುಸಾರ ಖಾದಿ ಮಂಡಳಿಯಬಾಕಿಯನ್ನು ವಸೂಲಿ ಮಾಡಲು ಕ್ರಮ ಕೈಗೊಳ್ಳಲಾಗಿತ್ತು.

ಈ ಕ್ರಮ ಜಾರಿಗೊಳಿಸುವ ಪೂರ್ವದಲ್ಲಿ ಖಾದಿ ಆಯೋಗವು ದಿನಾಂಕ: 28.1.2002 ಮತ್ತು 5.2.2002ರ ಪತ್ರದಲ್ಲಿ ಸಂಘದ ಅನುಕಂಪದ ಕೋರಿಕೆ ಮೇರೆಗೆ ಖಾದಿ ಮಂಡಳಿ ಮತ್ತು ಸಂಘದ ಪ್ರತಿನಿಧಿಗಳು ಸಂಘದ ಹಣಕಾಸಿನ ವ್ಯವಹಾರವನ್ನು ಜಂಟಿಯಾಗಿ ನಿರ್ವಹಿಸಲು ಒಪ್ಪಿದಲ್ಲಿ ಪ್ರಸ್ತಾವನೆಯನ್ನು ಮರು ಪರಿಶೀಲನೆಗೆ ಸಲ್ಲಿಸಲು ಸೂಚಿಸಿತು. ಅದರಂತೆ ಸಂಘವು ದಿನಾಂಕ: 19.06.02ರಂದು ಮನವಿ ಸಲ್ಲಿಸಿ ಆಯೋಗದ ಸೂಚನೆಯನ್ನು ಪರಿಶೀಲಿಸುವಂತೆ ಕೋರಿರುತ್ತಾರೆ. ತದನಂತರ ಸದರಿ ಕೋರಿಕೆಯಂತೆ ಮಂಡಳಿಯು ದಿನಾಂಕ: 2.7.2002ರಂದು ಖಾದಿ ಆಯೋಗ ಮುಂಬಯಿ ಇವರಿಗೆ ಪತ್ರ ಬರೆದು ಪ್ರಸ್ತಾವನೆಯನ್ನು ಮರು ಪರಿಶೀಲಿಸುವಂತೆ ಕಳುಹಿಸಲಾಗಿದೆ. ಈ ಬಗ್ಗೆ ಖಾದಿ ಆಯೋಗದಿಂದ ಇದುವರೆಗೆ ಯಾವುದೇ ರೀತಿ ಅಂತಿಮ ತೀರ್ಮಾನ ಬಂದಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಭೂ ಕಂದಾಯ ವಸೂಲಾತಿ ಕ್ರಮವನ್ನು ಸದ್ಯಕ್ಕೆ ಸ್ಥಗಿತಗೊಳಿಸಲಾಗಿರುವುದು.

ಶಿವಮೊಗ್ಗ ತಾಲ್ಲೂಕಿನಲ್ಲಿ ರೇಷ್ಮೆ ಅಭಿವೃದ್ಧಿ

1788(2121): ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) : ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಶಿವಮೊಗ್ಗ ತಾಲ್ಲೂಕಿನಲ್ಲಿ ರೇಷ್ಮೆ ಅಭಿವೃದ್ಧಿ ಆಗಿರುವ ಪ್ರದೇಶದ ವಿಸ್ತೀರ್ಣವೆಷ್ಟು? ಹಾಗೂ ಅಲ್ಲಿ ಮಾರುಕಟ್ಟೆಕ್ಕೆ ಸ್ಥಾಪಿಸುವ ಪ್ರಸ್ತಾವನೆ ಯಾವ ಹಂತದಲ್ಲಿದೆ.

ಆ. ಗಾಜನೂರಿನಲ್ಲಿ ರೇಷ್ಮೆ ಅಭಿವೃದ್ಧಿ ಮಂಡಳಿ ಕಟ್ಟಡವು ಯಾವ ಹಂತದಲ್ಲಿದೆ. ಈ ಕಟ್ಟಡ ಕಟ್ಟಲು ನಿಗಧಿಪಡಿಸಿದ್ದ ಅಂದಾಜು ಮೊತ್ತ ಎಷ್ಟು? ಇದರಿಂದ ಬರುತ್ತಿರುವ ವಾರ್ಷಿಕ ಉತ್ಪಾದನೆ ಎಷ್ಟು?

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಮತ್ತು ಜವಳಿ ಸಚಿವರು)

ಅ. ಶಿವಮೊಗ್ಗ ತಾಲ್ಲೂಕಿನಲ್ಲಿ ಪ್ರಸ್ತುತ 58.83 ಹೆಕ್ಟೇರ್ ಪ್ರದೇಶದಲ್ಲಿ ಹಿಪ್ಪುನೇರಳೆ ವ್ಯವಸಾಯವಿದೆ. ಶಿವಮೊಗ್ಗದಲ್ಲಿ 1983 ರಿಂದಲೇ ರೇಷ್ಮೆ ಗೂಡು ಮಾರುಕಟ್ಟೆ ಕಾರ್ಯ ನಿರ್ವಹಿಸುತ್ತಿರುವ ಕಾರಣ ಹೊಸದಾಗಿ ಗೂಡು ಮಾರುಕಟ್ಟೆ ಸ್ಥಾಪಿಸುವ ಪ್ರಸ್ತಾಪ ಇಲ್ಲ.

ಆ. ಗಾಜನೂರಿನಲ್ಲಿ ಯಾವುದೇ ಹೊಸ ಕಟ್ಟಡ ಕಟ್ಟುವ ಪ್ರಸ್ತಾವನೆ ಇಲ್ಲ. ರೇಷ್ಮೆ ಇಲಾಖೆಯ ನೂಲು ಬಿಚ್ಚುವ ಸಂಕೀರ್ಣದ ಎರಡು ಶೆಡ್‌ಗಳನ್ನು ಕೇಂದ್ರ ರೇಷ್ಮೆ ಮಂಡಳಿಗೆ ನೀಡಲಾಗಿದ್ದು ಅವರು ಒಂದರಲ್ಲಿ ಪ್ರಾತ್ಯಕ್ಷತೆ ಮತ್ತು ತರಬೇತಿ ನೀಡುವ ಉದ್ದೇಶಕ್ಕಾಗಿ ಮಲ್ಟಿ ಎಂಡ್ ರೀಲಿಂಗ್ ಘಟಕವನ್ನು ಹಾಗೂ ಇನ್ನೊಂದು ಶೆಡ್ಡಿನಲ್ಲಿ ಆಡಳಿತ ಕಛೇರಿ ಸ್ಥಾಪಿಸಿದ್ದಾರೆ. ಒಂದು ಶೆಡ್‌ನ್ನು ಖಾಸಗಿಯವರಿಗೆ ರೀಲಿಂಗ್ ಕಾರ್ಯಕ್ಕೆ ನೀಡಲಾಗಿದೆ ಉಳಿದ ಏಳು ಶೆಡ್ಡ್‌ಗಳನ್ನು ಖಾಸಗಿ ರೀಲರುಗಳು ಪಡೆಯಲು ಮುಂದೆ ಬಂದಲ್ಲಿ ನೀಡಲಾಗುವುದು.

ಶಿವಮೊಗ್ಗದಲ್ಲಿ ಮತ್ಸ್ಯಾಲಯ ಪ್ರಾರಂಭ

1789(2123): ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) : ಮಾನ್ಯ ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?